**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಯವರ**

**ನ್ಯಾಯಾಲಯ, ಹುಣಸೂರು**

**ಸಿ.ಸಿ. ಸಂಖ್ಯೆ: 57/2022**

ಫಿರ್ಯಾದಿದಾರರುಃ ಸರ್ಕಾರದ ಪರ ಅಬಕಾರಿ ನಿರೀಕ್ಷಕರು,
ಹುಣಸೂರು ವಲಯ, ಹುಣಸೂರು.

ವಿರುದ್ಧ,

ಆರೋಪಿ/ಗಳು **ನರಸಿಂಹ ಬಿನ್ ಜವರಯ್ಯ,**
ಸುಮಾರು 30 ವರ್ಷ ವಯಸ್ಸು
ವಾಸಃ ನಂ.33, ಬಲ್ಲೇನಹಳ್ಳಿ ಗ್ರಾಮ,
ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ.

**ದೋಷಾರೋಪಣೆ**

ಶ್ರೀ ಮನು ಪಟೇಲ್ ಬಿ.ವೈ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

1. ದಿಃ 24.04.2021 ರಂದು ಹುಣಸೂರು ತಾಲ್ಲೂಕು, ಬಲ್ಲೇನಹಳ್ಳಿ ಗ್ರಾಮದ ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ, ತನ್ನ ಮನೆಯಲ್ಲಿ ಒಂದು ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ.ಎಲ್ ಅಳತೆಯ ಒರಿಜಿನಲ್ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ 96 ಟೆಟ್ರಾಪ್ಯಾಕೆಟ್‌ಗಳನ್ನು , ತನ್ನ ಬಳಿ ಕರ್ನಾಟಕ ಅಬಕಾರಿ ಕಾಯ್ದೆ ಪ್ರಕಾರ ಸಮಾನ್ಯ ಪ್ರಮಾಣಕ್ಕಿಂತ ಅಧಿಕ ಪ್ರಮಾಣದಲ್ಲಿ ಸಂಗ್ರಹಿಸಿ ಇಟ್ಟುಕೊಂಡಿರುತ್ತೀರೆಂದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 14 ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ,

ಒಂದು ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ.ಎಲ್ ಅಳತೆಯ ಒರಿಜಿನಲ್ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ 96 ಟೆಟ್ರಾಪ್ಯಾಕೆಟ್‌ಗಳನ್ನು, ಯಾವುದೇ ರಹದಾರಿ ಇಲ್ಲದೇ ಮತ್ತು ಅಧಿಕೃತ ಅಂಗಡಿಯ ಬಿಲ್ಲುಗಳು ಇಲ್ಲದೇ ತನ್ನ ಬಳಿ ಸಂಗ್ರಹಿಸಿ ಇಟ್ಟುಕೊಂಡಿರುತ್ತೀರೆಂದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 15 ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ, ಒಂದು ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ.ಎಲ್ ಅಳತೆಯ ಒರಿಜಿನಲ್ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ 96 ಟೆಟ್ರಾಪ್ಯಾಕೆಟ್‌ಗಳನ್ನು, ತನ್ನ ಬಳಿ ಅಕ್ರಮವಾಗಿ ಸಂಗ್ರಹಿಸಿ ಇಟ್ಟುಕೊಂಡಿರುತ್ತೀರೆಂದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 32(1) ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

4. ಕೊನೇಯದಾಗಿ , ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ, ಒಂದು ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ.ಎಲ್ ಅಳತೆಯ ಒರಿಜಿನಲ್ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ 96 ಟೆಟ್ರಾಪ್ಯಾಕೆಟ್‌ಗಳನ್ನು, ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ತಮ್ಮ ಮನೆಯಲ್ಲಿ ಸಂಗ್ರಹಿಸಿ ಇಟ್ಟುಕೊಂಡಿರುತ್ತೀರೆಂದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 38(ಎ) ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆರೋಪಣೆಯು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆರೋಪಣೆಗೆ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ಮನು ಪಟೇಲ್ ಬಿ.ವೈ.)**

ದಿನಾಂಕಃ **28.08.2023**

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಹುಣಸೂರು.